ಇ) ಹಳೆಯ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಿ ಹೊಸ ಮಾರ್ಗಸೂಚಿಗಳನ್ನು ಅಳವಡಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಹೊಸ ಮಾರ್ಗಸೂಚಿಗಳನ್ನು ಅಳವಡಿಸಲಾಗುವುದು; ಹಾಗೂ ರೈತರಿಗೆ ಎಷ್ಟು ಸಹಾಯಧನವನ್ನು ನೀಡಲಾಗುವುದು?

ಶ್ರೀ . ಬಿ.ಎನ್.ಬಚ್ಚೇಗೌಡ
(ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು)

ಅ) ಬಂದಿದೆ.

ಆ) 11ನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಆರ್ಥಿಕ ಸಹಯೋಗದ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 1000 ಚದರಡಿ ವಿಸ್ತೀರ್ಣದ ಆರ್.ಸಿ.ಸಿ. ಹುಳು ಸಾಕುವ ಮನೆ ನಿರ್ಮಾಣಕ್ಕೆ ರೂ.1.50 ಲಕ್ಷಗಳ ಘಟಕ ದರ ನಿಗದಿಪಡಿಸಿದ್ದು. ಇದರಲ್ಲಿ ಶೇಕಡ 50ರ ಸಹಾಯಧನವಾಗಿ ರೂ.75,000/–ಗಳನ್ನು ನೀಡಲಾಗುತ್ತಿದೆ.

ಇ) ಪ್ರಸ್ತುತ 1000 ಚದರಅಡಿ ಮನೆಗೆ ರೂ.75.000/–, 600 ಚ.ಅಡಿ ಮನೆಗೆ ರೂ. 50,000/– ಹಾಗೂ 375 ಚ.ಅಡಿ ಮನೆಗೆ ರೂ. 25,000/– ಗಳ ಸಹಾಯಧನ ನೀಡಲಾಗುತ್ತಿದೆ. 12 ನೇ ಪಂಚವಾರ್ಷಿಕ ಯೋಜನಾ ಅವಧಿಯಲ್ಲಿ. ಈ ಮೊತ್ತವನ್ನು ಕ್ರಮವಾಗಿ ರೂ. 1,00,000/– ರೂ.75,000/– ಹಾಗೂ ರೂ.37,500/– ಗಳಿಗೆ ಹೆಚ್ಚಿಸುವ ಪ್ರಸ್ತಾವನೆಯು ಕೇಂದ್ರ ರೇಷ್ಮೆ ಮಂಡಳಿಯ ಮುಂದಿದೆ. ಆದೇಶ ನಿರೀಕ್ಷಿಸಲಾಗಿದೆ.

ಆನೆಗಳ ಹಾವಳಿಯಿಂದ ಪ್ರಾಣ ಹಾನಿ ಮತ್ತು ಬೆಳೆ ಹಾನಿ
(238) 163

ಶ್ರೀ ನರೇಂದ್ರ ಸ್ವಾಮಿ ಪಿ.ಎಂ (ಮಳವಳ್ಳಿ)

ಅ) ಬರದಿಂದ ತತ್ತರಿಸಿರುವ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕಿನ ಅರಣ್ಯ ಪ್ರದೇಶಗಳಲ್ಲಿ ಆನೆಗಳ ಹಾವಳಿ ಪ್ರಾರಂಭವಾಗಿದ್ದು, ಈ ಹಿಂದಿನ ಮಾಹಿತಿಯಂತೆ ಸಾಕಷ್ಟು ಪ್ರಾಣ ಹಾನಿ ಮತ್ತು ಬೆಳೆ ಹಾನಿ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮೇಲಿನ ವಿಚಾರಗಳ ಹಾನಿಗಳನ್ನು ತಡೆಗಟ್ಟುವುದು ಹಾಗೂ ಬೆಳೆ ಪರಿಹಾರ ನೀಡುವ ವಿಷಯವಾಗಿ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು).

ಇ) ಪ್ರಸಕ್ತ ಬೇಸಿಗೆಯಲ್ಲಿ ಆನೆ ಹಾವಳಿಯಿಂದ ಜನರನ್ನು ರಕ್ಷಿಸಲು ಇಲಾಖೆ ಕೈಗೊಂಡಿರುವ ವಿಶೇಷ ಕ್ರಮಗಳೇನು?

ಶ್ರೀ ಸಿ.ಪಿ.ಯೋಗೇಶ್ವರ
(ಮಾನ್ಯ ಅರಣ್ಯ ಸಚಿವರು)

ಅ) ಹೌದು.

ಆ) ಮಂಡ್ಯ ವಿಭಾಗದ ಮಳವಳ್ಳಿ ವಲಯದಲ್ಲಿ ಆನೆಗಳ ಹಾವಳಿಯಿಂದ ಉಂಟಾದ ಬೆಳೆಹಾನಿ ಮತ್ತು ಪ್ರಾಣಹಾನಿ ಪ್ರಕರಣಗಳಿಗೆ ನೀಡಿರುವ ಪರಿಹಾರದ ವಿವರಗಳು ಕೆಳಗಿನಂತಿವೆ.

(ರೂ.ಗಳಲ್ಲಿ)

ವರ್ಷ	ಪ್ರಾಣಹಾನಿ		ಬೆಳೆಹಾನಿ		ಒಟ್ಟು	
	ಪ್ರಕರಣ ಸಂಖ್ಯೆ	ನೀಡಿರುವ ಪರಿಹಾರ	ಪ್ರಕರಣ ಸಂಖ್ಯೆ	ನೀಡಿರುವ ಪರಿಹಾರ	ಪ್ರಕರಣ ಸಂಖ್ಯೆ	ನೀಡಿರುವ ಪರಿಹಾರ
2009–10	–	–	18	1,10,512.00	18	1,10,512.00
2010–11	–	–	73	5,39,920.00	73	5,39,920.00
2011–12	2	10,00,000.00	456	26,61,913.00	458	36,61,913.00
2012–13 (ಜನವರಿ –2013)	–	–	124	5,19,470.00	124	5,19,470.00

ಆನೆ ಹಾವಳಿಯಿಂದ ಬೆಳೆನಾಶವಾದ ಪ್ರಕರಣಗಳಲ್ಲಿ ರೈತರಿಗೆ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010, ದಿನಾಂಕ: 30–04–2011ರಂತೆ ಪರಿಹಾರ ವಿತರಿಸಲಾಗುತ್ತಿದೆ ಹಾಗೂ ಮಾನವ ಪ್ರಾಣ ಹಾನಿಗೆ ಸಂಬಂಧಿಸಿದಂತೆ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ: 03–08–2012 ರಂತೆ ಪರಿಹಾರ ಪಾವತಿಸಲಾಗಿದೆ.

ಇ) ಆನೆಗಳ ಹಾವಳಿಯಿಂದ ಜನರನ್ನು ರಕ್ಷಿಸಲು ಮಂಡ್ಯ ವಿಭಾಗದಲ್ಲಿ ಈ ಕೆಳಗಿನಂತೆ ಕ್ರಮ ಕೈಗೊಂಡಿದೆ.

1. ಮಂಡ್ಯ ವಿಭಾಗದ ಮಳವಳ್ಳಿ ವಲಯದಲ್ಲಿ 2009–10ನೇ ಸಾಲಿನವರೆಗೆ 6.936 ಕಿ.ಮೀ, 2010–11ನೇ ಸಾಲಿನಲ್ಲಿ 7.50 ಕಿ.ಮೀ, 2011–12ನೇ ಸಾಲಿನಲ್ಲಿ 8.370 ಕಿ.ಮೀ, 2012–13ನೇ ಸಾಲಿನಲ್ಲಿ 9 ಜನವರಿ–2013ರ ಅಂತ್ಯದವರೆಗೆ) 7.5 ಕಿ.ಮೀ ಆನೆ ತಡೆ ಕಂದಕ ಮತ್ತು ಆನೆ ದಾಟಲಾಗದ ಒಂದು ಗೇಟ್‌ನ್ನು ನಿರ್ಮಿಸಲಾಗಿದೆ.

2. 2011–12ನೇ ಸಾಲಿನಲ್ಲಿ 8.22 ಕಿ.ಮೀ ಸೋಲಾರ್ ಬೇಲಿ ನಿರ್ಮಾಣ ಮಾಡಿದ್ದು, 2012–13ನೇ (ಜನವರಿ–2013ರ ವರೆಗೆ) ಸಾಲಿನಲ್ಲಿ 5 ಕಿ.ಮೀ ಸೋಲಾರ್ ಬೇಲಿ ನಿರ್ಮಾಣ ಕಾರ್ಯದಲ್ಲಿ 0.65 ಕಿ.ಮೀ ಸೋಲಾರ್ ಬೇಲಿ ನಿರ್ಮಾಣ ಮುಗಿದಿದ್ದು, ಉಳಿಕೆ 4.350 ಸೋಲಾರ್ ಬೇಲಿ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

3. ಇದಲ್ಲದೇ ಆನೆಗಳ ಹಾವಳಿಯನ್ನು ತಡೆಗಟ್ಟಲು ಆನೆತಡೆ ಶಿಬಿರಗಳನ್ನು ನಿರ್ಮಿಸಿದೆ ಹಾಗೂ ಆನೆಗಳಿಗೆ ಆಹಾರದ ಕೊರತೆ ನೀಗಿಸಲು ಅರಣ್ಯದಲ್ಲಿಯೇ ಆಹಾರ ಲಭ್ಯವಾಗುವಂತೆ ಬಿದಿರು, ಹಲಸು ಮತ್ತಿತರೆ ಹಣ್ಣಿನ ಗಿಡಗಳನ್ನು ಬೆಳೆಸುವುದರ ಮೂಲಕ ಹಾಗೂ ಆನೆಗಳಿಗೆ ನೀರಿನ ಅಭಾವವಾಗದಂತೆ ಕಾಡಿನಲ್ಲಿನ ಕೆರೆಗಳ ಹೂಳೆತ್ತುವ ಕಾರ್ಯ, ಹೊಸಕೆರೆಗಳ ನಿರ್ಮಾಣ ಹಾಗೂ ಉಪ್ಪಿನ ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗಿದೆ. ಆನೆಗಳು ನಗರ ಪ್ರದೇಶಕ್ಕೆ ದಾಳಿ ಮಾಡುವುದನ್ನು ನಿಯಂತ್ರಿಸಲು ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿಕೊಂಡು ಆನೆಗಳು ಗ್ರಾಮಗಳ ಕಡೆ ದಾಳಿ ಮಾಡಿದಾಗ ಪಟಾಕಿ ಮತ್ತು ಮದ್ದುಗುಂಡುಗಳನ್ನು ಸಿಡಿಸಿ ಅವುಗಳನ್ನು ಬೆದರಿಸಿ ಕಾಡಿಗೆ ಹಿಮ್ಮೆಟ್ಟಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಕರಡಿ ದಾಳಿಗೆ ತುತ್ತಾಗಿರುವವರ ಸಂಖ್ಯೆ ಮತ್ತು ಅದಕ್ಕೆ ಪರಿಹಾರ

(268) 160

ಶ್ರೀ ನಾಗರಾಜು ಎಂ.ವಿ (ನೆಲಮಂಗಲ)

ಅ) ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಸೋಲೂರು ಹೋಬಳಿಯಲ್ಲಿ ಕರಡಿ ದಾಳಿಗೆ ತುತ್ತಾಗಿ ಮರಣ ಹೊಂದಿರುವವರ ಸಂಖ್ಯೆ